## ಐದುನೂರರ ಬೊಂಬಾಟ್ ಬಿರಾದಾರ್!

ಸ್ಟಾರ್ ಸುವರ್ಣದ 'ಬೊಂಬಾಟ್ ಭೋಜನ' ಸಂಚಿಕೆಯಲ್ಲಿ ವೈಜನಾಥ್ ಬಿರಾದಾರ್ ಅವರನ್ನು ಆಹ್ವಾನಿಸಿದ್ದು ಅತ್ಯಂತ ಸಮಂಜಸವೆನಿಸಿತು. ವಿಶಿಷ್ಟ ಅಭಿನಯದ ಮೂಲಕ ಕನ್ನಡ ಚಿತ್ರರಂಗದಲ್ಲಿ ಬೆಳೆದ ಹಾಸ್ಯ ಕಲಾವಿದರವರು. ಪೋಷಕ ನಟರಾಗಿ ರಾಷ್ಟ್ರಪ್ರಶಸ್ತಿಯನ್ನು ಪಡೆದಿದ್ದಾರೆ ಎನ್ನುವ ಹೆಗ್ಗಳಿಕೆ ಅವರದ್ದು. ಇದೀಗ ತಮ್ಮ 500ನೇ ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ ಎಂದು ಹೇಳಿದರು. ಇಂತಹ ಸಂದರ್ಭದಲ್ಲಿ ಸಿಹಿಕಹಿ ಚಂದ್ರು ಮತ್ತು ಅವರ ತಂಡ ಈ ಕಲಾವಿದರನ್ನು ಆಹ್ವಾನಿಸಿ ಅವರ ಅನುಭವವನ್ನು ಉಣಬಡಿಸಿದ್ದು ಔಚಿತ್ಯಪೂರ್ಣವಾಗಿತ್ತು.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಹಿರಿತೆರೆಯಿಂದ ಕಿರುತೆರೆಗೆ...

ಹಿರಿತೆರೆಯ ಪ್ರಮುಖ ಕಲಾವಿದರು ಈಗ ಕಿರುತೆರೆಯಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ. ಒಂದು ಕಡೆ ಸಿನಿಮಾಗಳಲ್ಲಿ ಇವರಿಗೆ ಅವಕಾಶಗಳ ಕೊರತೆ ಎದುರಾಗಿರಬಹುದು. ಅದ್ಭುತ ಕಲಾವಿದರ ಪ್ರಬುದ್ಧ ನಟನೆಯನ್ನು ಕಿರುತೆರೆಯಲ್ಲಾದರೂ ನೋಡೋ ಅವಕಾಶ ಸಿಕ್ಕಿದ್ದು ಅವರ ಅಭಿಮಾನಿಗಳಿಗೆ ಖುಷಿಯ ಸಮಾಚಾರ.

—ಆಕಸ್ಮಿತ ಪ್ರದೀಪ್, ಬೆಂಗಳೂರು

## 'ಬ್ಯಾಚುಲರ್ಸ್'ಗೆ ಬೇಕು ಭರ್ಜರಿ ಸರ್ಜರಿ

ಝೀ ಕನ್ನಡದ 'ಭರ್ಜರಿ ಬ್ಯಾಚುಲರ್ಸ್' ರಿಯಾಲಿಟಿ ಶೋ ಮೂಲಕ ಹೊಸದೇನನ್ನೋ ಹೇಳುತ್ತಿದ್ದಾರೆ ಎಂಬ ಭಾವನೆ ಹುಸಿಯಾಗಿದೆ. ಸಮಾಜದಲ್ಲಿ ಯಾವುದಕ್ಕೆ ಕಡಿವಾಣ ಹಾಕಿದ್ದಾರೋ ಅದಕ್ಕೆ ಇಲ್ಲಿ ಭರ್ಜರಿ ಮಣೆ ಹಾಕಲಾಗಿದೆ. ಪ್ರೇಮ ಪ್ರಕರಣ ಎಂದಾಕ್ಷಣ ಏನಾದರೂ ಮಾಡಿ ಸೈ ಎನ್ನಿಸಿಕೊಳ್ಳಬೇಕು ಎಂಬುದು ಸಿನಿಕತನ. ಹುಡುಗರು ತಮ್ಮ ಹಾವ–ಭಾವ, ಅಂಗಚೇಷ್ಟೆಗಳ ಮುಖಾಂತರ ಪ್ರೇಮ ನಿವೇದನೆ ಮಾಡಿಕೊಳ್ಳುವ ಪರಿ ಹಾಸ್ಯಾಸ್ಪದವಾಗಿದೆ. ಈ ಶೋನಲ್ಲಿ ಬಿಂಬಿತವಾಗುತ್ತಿರುವ ವಿಷಯಗಳು ಬರೀ ತಮಾಷೆಗೆಂದಾದರೂ, ಈ ದಿನಮಾನಗಳಲ್ಲಿ ಇವುಗಳನ್ನು ವಾಸ್ತವದಲ್ಲಿ ಕಲ್ಪಿಸಿಕೊಳ್ಳಲು ಸಾಧ್ಯ ಇಲ್ಲ.

—ಶಂಕರೇಗೌಡ ತುಂಬಕೆರೆ, ಮಂಡ್ಯ

ವಾರದ ಪತ್ರ

## ಅನುಕೂಲಸಿಂಧು ಶಾಸ್ತ್ರಕ್ಕೆ ಸಂಪ್ರದಾಯ ಬಲಿ

ಸಿರಿ ಕನ್ನಡದ 'ಊರ್ಮಿಳ'ದಲ್ಲಿ ಪುರೋಹಿತರು ಶಾಸ್ತ್ರೋಕ್ತವಾಗಿ ಮಂತ್ರ ಘೋಷ ಮಾಡಿ, ಜೈಲಿನ ಸೆಲ್‌ನಲ್ಲಿರುವ ವರನ ಕೈಗೆ ಹಾರ ಕೊಡುತ್ತಾರೆ; ವಧುವಿನ ಕೊರಳಿಗೆ ಮಾಲೆ ಹಾಕಲು, ಮಾಂಗಲ್ಯ ಕಟ್ಟಲು ಹೇಳುತ್ತಾರೆ. ಬಂದೀಖಾನೆಯ ಹೊಸ್ತಿಲು ಎರಡೂ ಬದಿ, ಸರಳುಗಳ ನಡುವೆ ಈ ಮದುವೆ ನಡೆಯುತ್ತದೆ. ಹೊಸ್ತಿಲ ಒಳ–ಹೊರಗೆ ನಿಂತು ಯಾವತ್ತೂ ಯಾವುದೇ ಶುಭಕಾರ್ಯ ಮಾಡುವುದಿಲ್ಲ. ಕೊಡುವುದು ತೆಗೆದು ಕೊಳ್ಳುವುದು ಮಾಡುವುದೂ ಇಲ್ಲ. ಯಾಕೋ ಪುರೋಹಿತರ ಶಾಸ್ತ್ರ ಸಂಪ್ರದಾಯವನ್ನು ಮೀರಿ ಅಡ್ಡದಾರಿ ಹಿಡಿದಿದೆ ಎಂದೆನಿಸಿತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಮಾನವತೆಯ ಸೆಲೆ, ಸಂಬಂಧಗಳ ಬೆಲೆ

ಸಿರಿ ಕನ್ನಡದ 'ಮತ್ತೆ ಮಾಯಾಮೃಗ' ಧಾರಾವಾಹಿಯಲ್ಲಿ ಬೃಂದಾಳ ಪಾತ್ರ ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ದತ್ತು ಪುತ್ರಿಯ ಕಾರಣಕ್ಕೆ ಗಂಡ ಬೃಂದಾಳನ್ನು ಬಿಟ್ಟು ಅಮೆರಿಕಕ್ಕೆ ಹೋಗುತ್ತಾನೆ. ಅಲ್ಲಿ ಬೇರೆ ಮದುವೆಯಾಗಿ ಒಂದು ಹೆಣ್ಣು ಮಗುವೂ ಆಗುತ್ತದೆ. ಬಹಳ ವರ್ಷಗಳ ನಂತರ ಹೆಂಡತಿಯನ್ನು ಕಳೆದುಕೊಂಡು, ಮೂಳೆ ಕ್ಯಾನ್ಸರಿಗೆ ಒಳಗಾಗಿ ಬೆಳೆದ ಮಗಳೊಂದಿಗೆ ಬೃಂದಾಳ ಹತ್ತಿರ ಬಂದು ಮಗಳ ಪಾಲನೆಗೆ ಕೇಳಿಕೊಳ್ಳುತ್ತಾನೆ. ಆಗ ಬೃಂದಾಳ ನಿಲುವು, ಆಕಸ್ಮಿಕವಾಗಿ ಎದುರಾಗುವ ಸನ್ನಿವೇಶ, ಮಗಳನ್ನು ಸ್ವೀಕರಿಸುವ ದೃಶ್ಯ ತುಂಬಾ ಚೆನ್ನಾಗಿ ಚಿತ್ರಿತವಾಗಿದೆ.

—ಭಾರತೀ ಗಂಗಾಧರ್, ಬೆಂಗಳೂರು.



## ಸಿನಿ ಸಮ್ಮಾನದ ಸೊಬಗು-ಸಂಭ್ರಮ

ಸ್ಟಾರ್ ಸುವರ್ಣದಲ್ಲಿ ಜುಲೈ 2ರಂದು ಪ್ರಸಾರವಾದ 'ಪ್ರಜಾವಾಣಿ ಸಿನಿ ಸಮ್ಮಾನ' ಕಾರ್ಯಕ್ರಮ ಸೊಗಸಾಗಿತ್ತು. ಪ್ರಶಸ್ತಿ ಪುರಸ್ಕೃತರ ಪ್ರತಿಭಾ ಮನ್ನಣೆ, ಸಂಭ್ರಮಾಚರಣೆ ಕಣ್ಣು ಕೋರೈಸುವಂತಿತ್ತು. ಮುದಗೊಳಿಸುವ ಮನೋರಂಜನೆ ಕಾರ್ಯಕ್ರಮಕ್ಕೆ ಮೆರುಗು ಕಟ್ಟಿತ್ತು.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

## ಅಂತರಾತ್ಮವೇ ಪರಮಾತ್ಮ

ದಿನವೂ ಜನಸಾಮಾನ್ಯರ ಭಾವನೆ, ಬವಣೆಗಳನ್ನು ಬಿಂಬಿಸುತ್ತಾ ಅದಕ್ಕೆ ತಮ್ಮ ಪರಿಹಾರವನ್ನು ಸೂಚಿಸುತ್ತಿರುವ ಝೀ ಕನ್ನಡದ 'ಭೂಮಿಗೆ ಬಂದ ಭಗವಂತ' ಧಾರಾವಾಹಿ ಖುಷಿ ಕೊಡುತ್ತಿದೆ. ಅದರಲ್ಲಿ ಇಂದಿನ ಶಿಕ್ಷಣ ಒಂದು ದಂಧೆ ಆಗಿರುವುದನ್ನೂ, ವ್ಯಕ್ತಿತ್ವ ರೂಪಿಸುವ ಶಿಕ್ಷಣ ಇಲ್ಲದಿರುವುದನ್ನೂ ಮನಮುಟ್ಟುವಂತೆ ಯಶಸ್ವಿಯಾಗಿ ನಿರೂಪಿಸಿರುವುದು ಗಮನಾರ್ಹ.

ಜನ ಶಿಕ್ಷಣವನ್ನು ಕಂಡುಕೊಳ್ಳದೆ ಕೊಂಡುಕೊಳ್ಳುವ ಪ್ರಯತ್ನವನ್ನು ಲೇವಡಿ ಮಾಡಿದ್ದು ವಿಶೇಷವೆನಿಸಿತು. ಸಮಾಜದಲ್ಲಿ ವರ್ಣಭೇದ ನೀತಿಯಿಂದ ಕೃಷ್ಣಸುಂದರಿಯ ಮದುವೆಯಾಗದಿರಲು ಅವಳ ಕೀಳರಿಮೆಯೇ ಕಾರಣವೆಂದು ತಿಳಿಹೇಳಿ, ಅವಳ ಆತ್ಮವಿಶ್ವಾಸವನ್ನು ಶಿವ ಪ್ರಸಾದ್ ಮತ್ತು ಗಿರಿಜಾ ಬಡಿದೆಬ್ಬಿಸುವ ರೀತಿ ಇಷ್ಟವಾಗುವಂತಿತ್ತು. ಎಲ್ಲ ವಿಫಲತೆಗಳಿಗೂ ಕಣ್ಣಿಗೆ ಕಾಣದಿರುವ ಪರಮಾತ್ಮನನ್ನೇ ಹೊಣೆ ಮಾಡಿ, ಪ್ರಯತ್ನ ಮಾಡದಿದ್ದರೆ ಸೋಲು ಖಚಿತ ಎಂಬುದು ಒಪ್ಪುವಂತಹದ್ದು.

—ವಾ. ಮುರಳೀಧರ, ತೀರ್ಥಹಳ್ಳಿ

## ಥಟ್.. ನಿರಾಶೆ ಮಾಡದಿರಿ...

ಚಂದನದಲ್ಲಿ ಒಂದು ತಿಂಗಳಿನಿಂದ 'ಥಟ್ ಅಂತಾ ಹೇಳಿ' ಕಾರ್ಯಕ್ರಮದಲ್ಲಿ ಹಳೆಯ ಕಾರ್ಯಕ್ರಮಗಳನ್ನು ಮರು ಪ್ರಸಾರ ಮಾಡಲಾಗುತ್ತಿದೆ. ಇದರಿಂದ, ವೀಕ್ಷಕರಿಗೆ ತೀವ್ರ ನಿರಾಶೆ ಉಂಟಾಗುತ್ತಿದೆ. ಈಗಿರುವ ಸಿಬ್ಬಂದಿಗೆ ಆಗದಿದ್ದರೆ, ಬೇರೆಯವರಿಗೆ ಆ ಜವಾಬ್ದಾರಿಯನ್ನು ನೀಡಬಹುದು. ಹಳೆಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದರೆ ಅದು ದಾಖಲೆಯಾದೀತೆ?

—ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ

## ಮಯ್ಯ ಎನ್ನುವ ಆಹಾರ ನಿಘಂಟು

ಚಂದನದಲ್ಲಿ ಪ್ರತಿವಾರ ವಿವಿಧ ಕ್ಷೇತ್ರದ ಸಾಧಕರ ಪರಿಚಯವನ್ನು ಮಾಡಿಕೊಡುವುದೊಂದು ವಿಶೇಷ ಕಾರ್ಯಕ್ರಮ. ಇತ್ತೀಚೆಗೆ ಹೋಟೆಲ್ ಉದ್ಯಮಿ ಸದಾನಂದ ಮಯ್ಯ ಅವರ ಸಂದರ್ಶನ ಪ್ರಸಾರವಾಯಿತು. ಅದನ್ನು ಎಂದೂ ಮರೆಯಲು ಆಗುವುದಿಲ್ಲ. ದಿನ ನಿತ್ಯದ ಅಡುಗೆ, ತಿಂಡಿಯ ವೈಜ್ಞಾನಿಕ ವಿವರಣೆ, ಅವರ ತಿಳಿವಳಿಕೆ ಒಂದು ನಿಘಂಟಿಗೆ ಸರಿ ಎನಿಸಿತು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು